# ಶ್ರೀ ಜಗದ್ಗುರು ರೇಣುಕಾಚಾರ್ಯ ವಿಜ್ಞಾನ, ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ

# 9. ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 009

03–09–2021

## ರಾಷ್ಟ್ರೀಯ ಶಿಕ್ಷಣ ನೀತಿ – 2020ರ ಕಾರ್ಯಾಗಾರದ ವರದಿ




ದಿನಾಂಕ 03–09–2021ರ ಶುಕ್ರವಾರದಂದು ಶ್ರೀ ಜಗದ್ಗುರು ರೇಣುಕಾಚಾರ್ಯ ವಿಜ್ಞಾನ, ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯ, # 9, ರೇಸ್ ಕೋರ್ಸ್ ರಸ್ತೆ, ಬೆಂಗಳೂರು – 560 009 ಮತ್ತು ಶ್ರೀ ಜಗದ್ಗುರು ರೇಣುಕಾಚಾರ್ಯ ಮಹಿಳಾ ವಿದ್ಯಾಲಯಗಳು ಜಂಟಿಯಾಗಿ ಒಂದು ದಿನದ ರಾಷ್ಟ್ರೀಯ ಶಿಕ್ಷಣ ನೀತಿ – 2020 ಕಾರ್ಯಾಗಾರವನ್ನು ಶ್ರೀ ಜಗದ್ಗುರು ರೇಣುಕಾಚಾರ್ಯ ಮಹಿಳಾ ವಿದ್ಯಾಲಯದಲ್ಲಿ ಏರ್ಪಡಿಸಿದ್ದವು.

ಕಾರ್ಯಾಗಾರಕ್ಕೆ ಸಂಪನ್ಮೂಲ ವ್ಯಕ್ತಿ ಹಾಗೂ ಮುಖ್ಯ ಅತಿಥಿಗಳಾಗಿ ಶೈಕ್ಷಣಿಕ ಮತ್ತು ಸಾಮಾಜಿಕ ಅಧ್ಯಯನದ ಕೇಂದ್ರದ ಶ್ರೀಯುತ ಗಿರೀಶ್'ರವರು ಆಗಮಿಸಿದ್ದರು.

ಕಾರ್ಯಾಗಾರವು ಪ್ರಾರ್ಥನೆಯೊಂದಿಗೆ ಪ್ರಾರಂಭವಾಯಿತು. ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಡಾ. ಪ್ರೇಮ ರವರು ಕಾರ್ಯಾಗಾರದ ಪ್ರಾಸ್ತಾವಿಕ ನುಡಿಯನ್ನು ನಡೆಸಿಕೊಟ್ಟರು.

ಶ್ರೀ ಜಗದ್ಗುರು ರೇಣುಕಾಚಾರ್ಯ ವಿಜ್ಞಾನ, ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಪ್ರಾಂಶುಪಾಲರಾದ ಡಾ. ಎಸ್. ಕಾಂತರಾಜು ರವರು ಈ ಕಾರ್ಯಾಗಾರ ನಮ್ಮೆಲ್ಲರ ಅನುಮಾನಗಳನ್ನು ಬಗೆ ಹರಿಸುತ್ತದೆ ಎಂಬ ಆಶಯವನ್ನು ವ್ಯಕ್ತಪಡಿಸಿದರು.

ಸಂಪನ್ಮೂಲ ವ್ಯಕ್ತಿಗಳಾದ ಶ್ರೀ ಗೌರೀಶ್ ರವರು ಹಿಂದಿನ ಶೈಕ್ಷಣಿಕ ಹೇಗಿತ್ತು ಮತ್ತು ಹೊಸ ಶೈಕ್ಷಣಿಕ ಹೇಗಿರಲಿದೆ ಎಂದು ಹಲವಾರು ಪ್ರಾತ್ಯಕ್ಷಿಕೆಗಳ ಮುಖಾಂತರ ವಿವರಿಸಿದರು. ಹಲವಾರು ನಿದರ್ಶನಗಳನ್ನು ಕೊಡುತ್ತಾ ಹೊಸ ರಾಷ್ಟ್ರೀಯ ಶಿಕ್ಷಣ ನೀತಿ –

2020'ಯ ವಿಶ್ವರೂಪವನ್ನು ತೋರಿಸಿದರು.  ಹೊಸ ರಾಷ್ಟ್ರೀಯ ಶಿಕ್ಷಣ ನೀತಿ – 2020 ರ ನೀತಿಯ ಪ್ರಕಾರ ಯಾವೆಲ್ಲ ಬದಲಾವಣೆಗಳನ್ನು ನಿರೀಕ್ಷಿಸಲಾಗಿದೆ, ಎಷ್ಟೆಲ್ಲ ಅವಕಾಶಗಳಿವೆ ಎಂಬುದನ್ನು ಹೇಗೆ ವಿದ್ಯಾರ್ಥಿಗಳಿಗೆ ಮನವರಿಕೆ ಮಾಡಿಕೊಡಬೇಕೆಂದು ಎಲ್ಲ ಶಿಕ್ಷಕ ವೃಂದಕ್ಕೆ ತಿಳಿಸಿದರು.

ರಾಷ್ಟ್ರೀಯ ಶಿಕ್ಷಣ ನೀತಿ – 2020 ರ ಪ್ರಕಾರ DC, DSE, OE, SECC, AECC ಗಳ ಬಗ್ಗೆ ಸವಿಸ್ತಾರವಾಗಿ ತಿಳಿಸಿದರು.

ವಿದ್ಯಾರ್ಥಿಗಳು ಯಾವ ಹಂತದಲ್ಲಿಯಾದರೂ ತಮ್ಮ ಅಭ್ಯಾಸಕ್ಕೆ ತೊಂದರೆ ಬಂದರೆ ಈ ಶಿಕ್ಷಣ ನೀತಿ ಹೇಗೆ ಅವರ ಸಹಾಯಕ್ಕೆ ಬರುತ್ತದೆ ಎಂದು ವಿವರವಾಗಿ ತಿಳಿಸಿದರು. ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸವನ್ನು ಮುಂದುವರಿಸಲು ಏನಾದರೂ ತೊಂದರೆ ಆದಲ್ಲಿ ಆಯಾ ವರ್ಷದ ಕೊನೆಯಲ್ಲಿ ಒಳ್ಳೆ ಅಂಕಗಳನ್ನು ಗಳಿಸಿ ಪರೀಕ್ಷೆ ಪಾಸಾದಲ್ಲಿ, ಪ್ರಮಾಣ ಪತ್ರಗಳನ್ನೂ ನೀಡಲಾಗುವುದು.  ಮೊದಲನೇ ವರ್ಷದ ಕೊನೆಯಲ್ಲಿ ವಿದ್ಯಾರ್ಥಿ ತನ್ನ ವಿದ್ಯಾಭ್ಯಾಸವನ್ನು ಮುಂದುವರಿಸಲು ಸಾಧ್ಯವಾಗದಿದ್ದಲ್ಲಿ, ಪರೀಕ್ಷೆಯಲ್ಲಿ ಉತ್ತೀರ್ಣನಾದರೆ ಪ್ರಮಾಣ ಪತ್ರವನ್ನು ಕೊಡಲಾಗುವುದು ಹಾಗೇ ಎರಡನೇ ವರ್ಷದ ಕೊನೆಯಲ್ಲಿ ಉತ್ತೀರ್ಣನಾದರೆ ಡಿಪ್ಲೊಮೋ ಪ್ರಮಾಣ ಪತ್ರವನ್ನು, ಮೂರನೇ ವರ್ಷದ ಕೊನೆಯಲ್ಲಿ ಪದವಿ ಪ್ರಮಾಣ ಪತ್ರಗಳನ್ನೂ ನೀಡಲಾಗುವುದು.  ಪುನ: ವಿದ್ಯಾರ್ಥಿಯು ನಿಗಧಿತ ಸಮಯದಲ್ಲಿ ವಿದ್ಯಾಭ್ಯಾಸವನ್ನು ಮುಂದುವರೆಸಬಹುದು.  ಆದ್ದರಿಂದ ರಾಷ್ಟ್ರೀಯ ಶಿಕ್ಷಣ ನೀತಿಯು ಹೆಚ್ಚು ವಿದ್ಯಾರ್ಥಿ ಕೇಂದ್ರೀಕೃತವಾಗಿದೆ ಎಂದು ವಿವರಿಸಿದರು.

ಶ್ರೀಯುತರು ಅಧ್ಯಾಪಕರ ಅನೇಕ ಅನುಮಾನಗಳನ್ನು ಬಗೆ ಹರಿಸಿದರು.  ಕಾರ್ಯಕ್ರಮವು ವಂದನಾರ್ಪಣೆಯೊಂದಿಗೆ ಮುಕ್ತಾಯವಾಯಿತು.









ಡಾ. ಬಿ.ಎಲ್. ಮಂಜುಳ
ಸಂಚಾಲಕರು
(ರಾಷ್ಟ್ರೀಯ ಶಿಕ್ಷಣ ನೀತಿ 2020)

PRINCIPAL
Sri Jagadguru Renukacharya College
of Science, Arts & Commerce
Bengaluru-560 009.